ಭೂಮಿಗೆ ಬಿದ್ದ ಬೀಜ
ಎದೆಗೆ ಬಿದ್ದ ಅಕ್ಷರ
ಇಂದಲ್ಲ ನಾಳೆ ಫಲ ಕೊಡುವುದು
ದೇವನೂರು ಮಹದೇವ

'ಅದು' ಯಾವಾಗಲೂ ಅಷ್ಟೇ. ಅದಕ್ಕೆ ಒಂದು ಪೇಪರ್ ತುಂಡು ಸಿಕ್ಕರೆ ಸಾಕು. ನೊಬೆಲ್ ಪಾರಿತೋಷಕ ಸಿಕ್ಕಷ್ಟು ಖೋ ಸಂತೋಷ. ಆ ತುಂಡು ಪೇಪರನ್ನ ಅಗಲಿಸಿ ಅಂಗೈಯಲ್ಲಿ ಇಟ್ಟು. ಪಡ್ಡರಗಣ್ಣರಳಿಸಿಕೊಂಡು, ಎಡಗೈಲಿ ಮೂಗಿನಲ್ಲಿ ಸುರಿಯುತ್ತಿರುವ ಗೊಣ್ಣೆಯನ್ನು ತೀಡಿಕೊಳ್ಳುತ್ತಾ, ಚಿಂದಿ ಚಿಂದಿಯಾಗಿರುವ ಅಂಗಿಯಿಂದ ಒರೆಸಿಕೊಳ್ಳುವುದು. ಆದರೂ, ಹಟಕ್ಕೆ ಬಿದ್ದಂತೆ ಮೂಗಿನ ಹೊಳ್ಳೆಯಿಂದ ಕಾವೇರಿ ತೂಬಿನಿಂದ ನೀರು ಸುರಿದಂಗೆ ಸುರಿಯುತ್ತಿತ್ತು. ಅದನ್ನ ಲೆಕ್ಕಿಸದೇ ಕೈಲಿರುವ ತುಂಡು ಪೇಪರನ್ನೇ ದಿಟ್ಟಿಸುತ್ತಾ ನಿಂತಿರುತ್ತದೆ. ಇಲ್ಲವೇ, ದೊಡ್ಡ ಕಲ್ಲಿನ ಮೇಲೆ ಕುಂತು ಮತ್ತೆ ಕಣ್ಣರಳಿಸಿ ಕೈಲಿರುವ ಕಾಗದದ ಹಾಳೆಯ ಕಡೆಗೆ ನೋಡುವುದು. ಅಲ್ಲಿರುವ ಅಕ್ಷರಗಳ, ಪದಗಳ ಮೇಲೆ ಪಿಳಿ ಪಿಳಿ ಕಣ್ಣುಬಿಡುತ್ತಾ ಕಣ್ಣಾಡಿಸುವುದು. ಮತ್ತೆ ಆ ಹಾಳೆಯನ್ನ ಮಡಚಿ ಜೇಬಿನಲ್ಲಿ ಇಟ್ಟುಕೊಂಡು ನಂತರ ಏನೋ ಜ್ಞಾಪಿಸಿಕೊಂಡು, ಜೇಬಿನಿಂದ ಆ ಹಾಳೆಯನ್ನ ತೆಗೆದು ಓದಲು ಮುಂದಾಗುವುದು. 'ಅದ'ಕೆ ಅಕ್ಷರಗಳ ಮೇಲಿನ ವ್ಯಾಮೋಹ. ಅದಕ್ಕಾಗಿಯೇ, ಸಿಕ್ಕ ಸಿಕ್ಕ ಪೇಪರಿನ ತುಂಡನ್ನು ತೆಗೆದುಕೊಂಡು ಜೇಬಿನಲ್ಲಿಟ್ಟುಕೊಂಡು ಹೋದಲ್ಲಿ ಬಂದಲ್ಲಿ ಎಚ್ಚರಿಕೆ ವಹಿಸುತ್ತಿರುವ ಪ್ರಾಣಿ 'ಅದು.'

ಅಪ್ಪ ಉತ್ತರ ಕರ್ನಾಟಕದ ಹಳ್ಳಿ ಒಂದರಿಂದ ಕೂಲಿ ಅರಸಿ ಕುಟುಂಬ ಸಮೇತ ಬಂದಿದ್ದರು. ಅಲ್ಲಿ ಇಲ್ಲಿ ಕೂಲಿಗಾಗಿ ಅಲೆದು ಕೊನೆಗೆ, ಕಲ್ಲುಗಣಿಯಲ್ಲಿ ಸೇರಿಕೊಂಡಿದ್ದರು. ಅವರ ಜೊತೆಯಲಿ 'ಅದು' ಕೂಡ ಕಲ್ಲುಗಣಿಯಲ್ಲಿ ಕೂಲಿ ಕೆಲಸ ಮಾಡುತ್ತಿತ್ತು. 'ಅದು' ಬಾಲ ಕಾರ್ಮಿಕನಾದರೂ, ಅಪ್ಪ ಅಮ್ಮ ಬಿಡಬೇಕಲ್ಲಾ, ಹೊಟ್ಟೆಬಟ್ಟೆ, ಸಾಗಬೇಕಲ್ಲ. ಅಂದು ದುಡಿದು ಅಂದಿಗೇ ಖರ್ಚು ಮಾಡಬೇಕಾಗಿ ಬಂದಿತ್ತಲ್ಲಾ ಅದಕ್ಕಾಗಿ 'ಅದ'ನ್ನೂ ಜೊತೆಯಲ್ಲಿ ಕೂಲಿಗೆ ಕರೆದುಕೊಂಡು ಬಂದಿದ್ದರು.

ಕಲ್ಲುಗಣಿ ಒಂದು ಭಾಗದಲ್ಲಿ ಜೋಪಡಿ ಇತ್ತು. ಅಲ್ಲಿ ಗುಡಿಸಲಲ್ಲಿ ಇವರ ವಾಸ. ಗುಡಿಸಲೆಂದರೆ. ಜೋರು ಮಳೆ ಬಂದರೆ ತೋಟ ತೊಟಗುಟ್ಟುವ ಹನಿಗಳ ವಾದ್ಯ ಮೇಳಗಳ ಸಂಗಮ, ಬಿಸಿಲು ಬಂದರೆ ಆ ಗುಡಿಸಿಲಲ್ಲಿ ಸಣ್ಣ ಸಣ್ಣ ತೂತುಗಳ ಮೂಲಕ ಕಡ್ಡಿ ಕಡ್ಡಿಯಾಕಾರದ ವಾಲಿಕೆಯ ರೀತಿಯಲಿ ಬೆಳಕಿನ ಕಿರಣಗಳ ಜಾತ್ರೆಯ ಮೆರವಣಿಗೆ. ಚಳಿಯಾದರೆ ಮುಗಿಯಿತು. ಗುಬ್ಬಚ್ಚಿಗೂಡಿನಲ್ಲಿ ಗುಬ್ಬಚ್ಚಿ ತರಹ ದೇಹವನ್ನು ಮುದುರಿಕೊಂಡು ಮೂಲೆಯಲಿ ಬಿದ್ದಿರುವ ದಾನ್ಯಗಳ ಮೂಟೆಯಂತಹ ಜೀವಿಯ ದೇಹವನ್ನು ಕಾಣಬಹುದು. ಇನ್ನು ಒಬ್ಬರ ಪಕ್ಕ ಮಲಗಿದರೆ ಮಗ್ಗುಲ ಮಾಡಿಕೊಳ್ಳಲು ಆಗದು. ಕಾಲನ್ನು ಚಾಚಲು ಆಗುತ್ತಿರಲಿಲ್ಲ. ಅರೆ ಎಚ್ಚರ ಅರೆ ನಿದ್ರೆಯ ಮಂಪರಿನ ಪಡಿಪಾಟಲು ಅನುಭವಿಸುವ ಸ್ಥಿತಿ ಇತ್ತು.

'ಅದು' ಕೆಲಸ ಮಾಡುವ ಜಾಗದಲ್ಲಿ ಕೆಲಸ ಮಾಡದೆ. ಒಂಟಿಯಾಗಿ ಪೇಪರ್ ತುಂಡನ್ನು ಹಿಡಿದುಕೊಂಡು ನಿಂತಿರುತ್ತದೆ. ಅದಕೆ ಯಾವಾಗಲೂ ಪೇಪರ್ ಮೇಲೆಯೇ ದ್ಯಾನ. ಕಣ್ಣ ಪಿಳಕಿಸದೇ ಧ್ಯಾನಾವಸ್ಥೆಯಲ್ಲೇ ಕಾಗದ ತುಂಡನ್ನು ನೋಡುವುದರಲ್ಲೇ ಮೈಮರೆತು. ಗೋಳಗೊಮ್ಮಟನ ಅವತಾರ ಪುರುಷನ ರೀತ್ಯ ಇರುವನು.

'ಅದು' ನಿಂತಿರುವ ಭಂಗಿ, ದೂರದಲ್ಲೇ ನಿಂತು ನೋಡುತ್ತಿರುವ ಗಣಿ, ಉಸ್ತುವಾರಿಕೆಯನ್ನು ನೋಡುವ ತಮ್ಮಯ್ಯನ ಗಮನಕ್ಕೆ ಬಂತು.

'ಅದು' ಅಲ್ಲೇನು ನಿಂತು ಮತ್ತೇಂತದೋ ಮಾಡುತ್ತೆ' ಅಂತ ಅನುಮಾನಿಸಿದ ತಮ್ಮಯ್ಯ.

'ಏ ಕೆಂಚ ಅದೇನ್ ಮಾಡ್ತಾ ನಿಂತ್ಯೆತೆ. ಕೆಲ್ಸ ಮಾಡೋದ್ ಬಿಟ್ಟು. ಕೆಲ್ಸ ಮಾಡು ಅನ್ಬಾರ್ದೇ' ಎಂದು ಕೂಗಿ ಹೇಳಿದ.

'ಅದಕೆ ಓದೋ ಹುಚ್ಚು...' ಎಂದ ಕೆಂಚ.

'ಓದೋ ಹುಡ್ಗನಾ ಕೆಲ್ಸಕ್ಯಾಕೆ ಕರ್‍ಕೊಂಡ್ ಬಂದಿದ್ದೀಯಾ?'

'ಏನ್ ಮಾಡೋನ್ ಬುದ್ದಿ... ಹೊಟ್ಟೆಪಾಡು ನಡೀ ಬೇಕಲ್ಲಾ?'

'ನಿನ್ಗೇನು ಗ್ಯಾನಗೀನಾ ಇಲ್ವಾ... ಓದೋ ಹೊತ್ನಲ್ಲಿ ಓದ್ಬೇಕು. ಅದ್ನಬಿಟ್ಟು ಅವ್ನತ್ರ ಕೆಲ್ಸಾ ಮಾಡ್‌ಸ್ತಿಯಲ್ಲಾ...?'

'ಓ... ಬುಡು ಸಾಮಿ ನಮ್ಮಂತೋರ್‍ಗೆ ಯಾಕ್ ಸಾಮಿ ಇದ್ನ!'

'ಸುಮ್ಕಿರು ಅಂಗೆಲ್ಲಾ ಅನ್ಬಾರ್‍ದು... ಓದಾ ಮಕ್ಳನ್ನಾ ಓದ್ಸ್ ಬೇಕು ತಿಳಿತಾ'

'ಎಂಗೋ ಸಾಮಿ ಅದೆಲ್ಲಾ ನನ್ಗೊತ್ತಾಗಕಿಲ್ಲಾ.'

'ಆಯ್ತು... ಓಗು... ಓಗೂ... ಬಿರಬಿರನಾ...'

'ಆಯ್ತು... ಸಾಮಿ.'

ಕೆಂಚ ಬಂದು ಮಗನನ್ನು ಗದರಿಸಿಕೊಂಡು ಕೆಲಸ ಮಾಡೋದಿಕೆ ಹಚ್ಚುತ್ತಾನೆ. ಗುರ್‌ಬರ್ ಅಂತಾ ನಾಯಿ ಗುರ್ ಗುಟ್ಟುವಂತೆ ಅವರಪ್ಪನನ್ನೇ ಕೆಕ್ಕರಿಸಿಕೊಂಡು ನೋಡುತಾ ನಿಂತ. ನೆಲವನ್ನು ಕಾಲಿನ ಬೆರಳಿನಿಂದ ಗೀಚುತ್ತಾ ಪೆಚ್ಚು ಮೋರೆ ಮಾಡಿಕೊಂಡು ಮತ್ತೆ ಗುರಾಯಿಸಿದನು. ಕೆಂಚ ಆ ಕಡೆ ಹೋದ ಬಳಿಕ ಒಲ್ಲದ ಮನಸ್ಸಿನಿಂದ ಕಲ್ಲುದಿಂಡು ಬಿದ್ದಿರುವ ಕಡೆ ಕಾಲೆಳೆದು ಕೊಂಡು ಬರುವನು. ಅವನ ಮನಸ್ಸಿನಾಳದಲ್ಲಿ ತಕ ತಕ ಅಂತಾ ಒಲೆಯ ಮೇಲಿಟ್ಟಿರುವ ಹಿಟ್ಟು ಕುದಿದಂಗೆ ಕುದಿಯುತ್ತಿತ್ತು. ಸುತ್ತಲೂ ಕಣ್ಣಾಡಿಸುವನು. ಎಲ್ಲರೂ ಕೆಲಸ ಮಾಡುವುದು ಕಾಣಿಸಿದಾಗ ಅವರ ಮಧ್ಯೆ ನಾನೊಬ್ಬನೇ 'ಸಿಂಗನ ಮುಂದೆ ಮಂಗ' ಅನ್ನುವಾಗೆ ನಿಂತಿದ್ದರೆ ಸರಿಯಾಗಲ್ಲ ಎಂದು ಕೊನೆಗೆ ಸಣ್ಣ ಸಣ್ಣ ಕಲ್ಲಿನ ದಿಂಡನ್ನು ಎತ್ತಿಕೊಂಡು ಹೋಗಿ ಅಲ್ಲೇ ಪಕ್ಕ ರಾಶಿಯಲ್ಲಿ ಹಾಕತೊಡಗಿತು.

ಕಲ್ಲುಗಣಿ ಹೆಸರೇ ಸೂಚಿಸುವಂತೆ ಕಲ್ಲನ್ನ ಹೊರ ತೆಗೆಯುವುದು. ಭೂಗರ್ಭದಲ್ಲಿ ವಸುಂಧರೆ ತನ್ನೊಡಲಲ್ಲಿ ಅಡಗಿಸಿಟ್ಟುಕೊಂಡಿದ್ದ, ಅನಾದಿ ಕಾಲದಿಂದಲೂ ಮಗುವಿನ ರೀತಿಯಲ್ಲಿ ಕಾಪಾಡಿಕೊಂಡು ಬಂದಿದ್ದ ಅದಿರನ್ನು ಬಗೆದು, ಒಡಲನ್ನು ಬರಿದು ಮಾಡುವ ಮಾನವ ನಿರ್ಮಿತ ರಾಕ್ಷಸೀ ಕೃತ್ಯದ, ಅವಸಾನವೆಂಬಂತೆ ಡೈನಾಮೆಂಟಿನಿಂದ ಕಲ್ಲು ಬಂಡೆಯನ್ನು ಸಿಡಿಸಿ, ದೊಡ್ಡ ದೊಡ್ಡ ದಿಮ್ಮಿಯಾಕಾರವಾಗಿ ಬೇರ್ಪಡಿಸುವರು. ಅಂತಹ ಬಂಡೆ ಕಲ್ಲುಗಳನ್ನು ಕ್ರೇನ್ ಸಹಾಯದಿಂದ ಮೇಲಕ್ಕೆ ಎತ್ತಿ ಒಂದು ಕಡೆ ಇಟ್ಟು. ಅದರ ಮೂಲೆ ಮುಡುಕನ್ನ ಉಳಿ ಬಳಸಿ ನಯಗೊಳಿಸಿ ಸಿದ್ಧಗೊಳಿಸುವರು. ಅದರ ಸುತ್ತಳತೆಯನ್ನು ಅಳೆದು, ಆ ಅಳತೆಯ ಪ್ರಕಾರ ಮಾರಾಟ ಮಾಡುವರು. ಉಳಿದಂತೆ ಸಣ್ಣ ಕಲ್ಲನ್ನೂ, ಬೋಡ್ರಸ್ ಕಲ್ಲನ್ನೂ ಮನೆ ಕಟ್ಟಲು, ಸೇತುವೆ ಕಟ್ಟುವ ಮಾಲೀಕರಿಗೆ ಮಾರುವರು. ಒಟ್ಟಿನಲ್ಲಿ ಅಲ್ಲಿ ಉತ್ಪತ್ತಿಯಾದ, ಕಲ್ಲು ಚೂರು ಸಹ ಮಾರಾಟ ಮಾಡಿ, ಅಧಿಕ ಸಂಪಾದನೆಯನ್ನು ಮಾಡಿ ದೊಡ್ಡ ದೊಡ್ಡ ಕುಳಗಳಾಗಿ ಮೆರೆದಿದ್ದಾರೆ.

ಮರುದಿನ 'ಅದ'ನ್ನು ಗುಡಿಸಲಿನಲ್ಲಿ ಬಿಟ್ಟು, ಮಗುವನ್ನು ನೋಡಿಕೊಂಡಿರು ಎಂದು ಹೇಳಿ ಕೆಂಚ ಮತ್ತು ಅವನ ಹೆಂಡತಿ ಗಣಿ ಕೆಲಸಕ್ಕೆ ಬಂದಿದ್ದರು. ಮಧ್ಯಾಹ್ನದ ಹೊತ್ತಿಗೆ ಯಾಕೋ ಕೆಂಚನ ಹೆಂಡತಿಗೆ ಹೊಟ್ಟೆನೋವು ಕಾಣಿಸಿ ಕೊಂಡು ಕೈಕಾಲು ಸೇದು ಹೋಗಿ ನಡೆದಾಡಲು ಕಷ್ಟವಾದಾಗ 'ಗುಡಿಸಿಲಿಗೋಗಿ ಸುಧಾರಿಸಿಕೋ' ಎಂದು ಕೆಂಚ ಹೇಳಿದಾಗ ಕೆಲಸದ ಮಧ್ಯೆಯೇ ಗುಡಿಸಿಲಿಗೆ ವಾಪಸ್ ಬಂದಳು. ಗುಡಿಸಿಲಿನ ತಡಿಕೆಯನ್ನು ಹಿಂದೆ ಸರಿಸಿದಾಗ ಮಗು ಮಲಗಿಕೊಂಡಿತ್ತು. 'ಅದು' ಎತ್ಲಾಗೆ ಹೋಯ್ತು. ಈ ಸಂಕಟ ಜೊತೆಗೆ 'ಅದು' ಇಲ್ಲದ್ದು ಚಿಂತೆಗೀಡಾಗಿತ್ತು.

'ಓ ಅಣ್ಣಯ್ಯಾ 'ಅದು' ಇತ್ಲಾಗೇನು ಬಂತ್ಯಾ' ಅಂತ ಕಾಲು ಎಳೆದುಕೊಂಡು ಸುತ್ತಮುತ್ತ ಹುಡುಕಿದಳು. ಅದರ ಸುಳಿವೇ ಸಿಗಲಿಲ್ಲ. ಆಗ ಕೆಂಚನ ಹೆಂಡತಿಗೆ ಗಾಬರಿಯಾಗಿ, ಸರ್ಕಾರಿ ಸ್ಕೂಲಿನತ್ತಿರ ಬಂದು. ಕೊಠಡಿಯ ಒಳ ಇಣಕಿ ನೋಡಿದರೆ 'ಅದು' ಅಲ್ಲಿ ಕುಂತಿತ್ತು. ತೆರೆದ ಬಾಯನ್ನ ಊರಗಲ ಮಾಡಿಕೊಂಡು ಬೋರ್ಡ್ ಕಡೆ ಆಯಪ್ಪ ಬರೆಯೋದನ್ನೇ ಕಣ್ಣು ಮಿಟುಕಿಸದೆ ನೋಡುತ್ತಿತ್ತು.

'ಏ ಇಲ್ಯಾಕೆ ಬಂದಿ, ಮನೇಲಿ ಮಗು ನೋಡ್ಕೋ ಅಂತೇಳಿದ್ರೆ. ಅದೇನ್ ಓದೋ ಕಂತ ಬಂದಿ. ಬಾ...' ಎಂದು ಜೋರಾಗಿ ಕೂಗಿದಳು.

'ಯಾಕಮ್ಮಾ ಓದೋ ಹುಡ್ಗ ಓದ್ಸ್ ಬೇಕು? ಅದ್‌ಬಿಟ್ಟು ಬಾ ಅಂತೀಯಲ್ಲಾ ಇಲ್ಲಿಬಿಡು' ಅಂತ ಮಾಸ್ತರು ಹೇಳಿದರು.

'ಏ ಸಾಮಿ 'ಅದು' ಓದೋಕೆ ಬಂದ್ರೆ, ಹೊಟ್ಟೆ ತುಂಬಾದಾದ್ರೂ ಎಂಗೆ? ಅದ್ಕೆ ಎಷ್ಟೇಳಿದ್ರೂ ಅಷ್ಟೇನಾ. ಬುಡುಸಾಮಿ' ಅಂಗಲಾಚುವಳು.

'ಅದ'ಕೆ ಕಲಿಯೋ ಹುಚ್ಚು ಇದ್ದಾಂಗೆ ಐತೆ. ನಾನ್ಬೇಕಾದ್ರೆ ಫೀಜು–ಗೀಜು ಕಟ್ತೀನಿ ಆಯ್ತಾ'.